CONSTRUCTION OF BRIDGE BETWEEN AMBARAGODLU AND KALASAVALLI IN SAGAR TALUK

228. SRI KAGODU THIMMAPPA (Sagar).—Will the Minister for Public Works and Electricity be pleased to state.—

(*a*) whether it has come to the notice of the Government that due to Sharavathy project, Karur Hobli of Sagar Taluk has last the direct communication from the Taluk Headquarters ;

(*b*) whether it has come to their notice that there is a demand from the public for construction of a bridge between Ambaragodlu and Kalasavalli so as to provide all weather communication to this hobli :

(*c*) if so, the action taken by them :

(*d*) whether it has come to their notice that nearest communication between Sagar and Baindur is possible by construction of the above bridge ?

SRI H. M. CHANNABASAPPA, (Minister for Public works and Electricity)

(*a*) Yes. But in order to provide communication from Karur hobli to Sagar Taluk head-quarter a ferry crossing has been provided in Sharavathy reservoir waters between Ambaragodlu and Kalasavalli.

(*b*) Demands are being received.

(*c*) The construction of a bridge is not thought of as Motor launch is in operation to cross the submerged portions of the road.

(*d*) If a bridge is constructed here the distance between Sagar and Baindur will be reduced by 12 Miles.

ಶ್ರೀ ಕಾಗೋಡು ತಿಮ್ಮಪ್ಪ.—ತಮ್ಮ ಉತ್ತರದಲ್ಲಿ ಒಂದು ಸ್ಪೀಡ್ ಲಾಂಚ್ ಒದಗಿಸಲಾಗಿದೆ ಎಂದು ಹೇಳಿದ್ದೀರಿ. ಆದರಲ್ಲಿ ಬಸ್ ಮತ್ತು ಲಾರಿಗಳು ದಾಟುವುದಕ್ಕೆ ಅವಕಾಶ ಇಲ್ಲ. ಜನರು ಆದರಲ್ಲಿ ದಾಟಿದ ಮೇಲೆ ತಮ್ಮ ವಾಸ ಸ್ಥಳವನ್ನು ಸೇರಬೇಕಾದರೆ 15-25 ಮೈಲು ನಡೆದು ಹೋಗಬೇಕಾಗಿದೆ ಎಂಬುದೂ ಸರ್ಕಾರದ ಗಮನಕ್ಕೆ ಬಂದಿದೆಯೇ. ಆ ದೃಷ್ಟಿಯಿಂದ ಈ ಸೇತುವೆಯನ್ನು ಕಟ್ಟತಕ್ಕದ್ದು ಒಂದು ಜರೂರು ಪ್ರಶ್ನೆ ಯೆಂಬುದನ್ನು ಸರ್ಕಾರದವರು ಮನಗಂಡಿದ್ದಾರೆಯೇ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ಸೇತುವೆಗೆ ಒಂದು ಕೋಟಿ ರೂಪಾಯಿ ಖರ್ಚಾಗುತ್ತದೆ. ಪಂತ್ತು ಮೋಟಾರ್ ಲಾಂಚಿನಿಂದ ದಾಟಿದ ಮೇಲೆ ಅಂಬರಗೋಡ್ಲಿನಿಂದ ಕಳಸವಳ್ಳಿಗೆ ಕೆಲವು ಮೈಲಿಲು ದೂರ ನಡೆದು ಹೋಗಬೇಕೆಂಬುದನ್ನು ನಾನು ಒಪ್ಪುತ್ತೇನೆ. ಅದರ ಬಗ್ಗೆ ಸಣ್ಣಪುಟ್ಟ ಬಸ್‌ಗಳನ್ನು ಒದಗಿಸುವುದಕ್ಕೆ ಏರ್ಪಾಡು ಮಾಡಬಹುದು. ಆದರೆ ಅದಕ್ಕೋಸ್ಕರವೇ ಒಂದು ಕೋಟಿ ರೂಪಾಯಿ ಖರ್ಚು ಮಾಡಿ ಒಂದು ಸೇತುವೆ ಕಟ್ಟತಕ್ಕದ್ದು ಅನ್ ಎಕನಾಮಿಕಲ್ ಆಗುತ್ತದೆಂಬುದು ಸರ್ಕಾರದ ಅಭಿಪ್ರಾಯ.

ಶ್ರೀ ಕಾಗೋಡು ತಿಮ್ಮಪ್ಪ.— ಆದು 10 ಸಾವಿರ ಪ್ರಜಾ ಸಂಖ್ಯೆ ಇರತಕ್ಕ ಹೋಬಳಿ. ಅದರ ಜೊತೆಗೆ ಈ ಸೇತುವೆಯನ್ನು ಮಾಡಿದರೆ ಇದರಿಂದ ನೇರವಾಗಿ ಬೈಂದೂರಿಗೆ ಸಂಪರ್ಕವನ್ನು ಕಲ್ಪಿಸುವುದಕ್ಕೆ ಸಾಧ್ಯವಾಗುತ್ತದೆ. ಈ ಎರಡು ಕಾರಣಗಳಿಂದ ಅಲ್ಲ ಸೇತುವೆಯನ್ನು ಕಟ್ಟುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.— ಬೈಂದೂರು ತಾಲೂಕಿಗೆ ಬೇರೆ ಸಂಪರ್ಕ ಇದೆ. ಈ ಸೇತುವೆ ಮಾಡಿದರೆ ಕೇವಲ 1½ ಮೈಲು ಮಾತ್ರ ಉಳಿದ ಹಾಗೆ ಆಗುತ್ತದೆ. ಆ ದೃಷ್ಟಿಯಿಂದ ಇದಕ್ಕೆ ಒಂದು ಕೋಟಿ ರೂಪಾಯಿ ಖರ್ಚು ಮಾಡತಕ್ಕದ್ದು ಸಹಜವೇ ಎಂಬುದು ಪರಿಶೀಲನಾರ್ಹವಾದಂತಹ ಅಂಶ. ಮತ್ತು 10 ಸಾವಿರ ಜನರು ಏನಿದ್ದಾರೆ ಅವರಿಗೆ ಟ್ರಾನ್ಸ್‌ಪೋರ್ಟ್ ಫೆಸಿಲಿಟೀಸ್ ಮಾಡಬೇಕಾದುದು ಅವಶ್ಯಕವೆಂಬುದನ್ನು ಸರ್ಕಾರ ಒಪ್ಪುತ್ತದೆ. ಆದ್ದರಿಂದ ಅದರ ಬಗ್ಗೆ ಅಲ್ಲಿ ಯಾವ ರೀತಿಯ ಸಣ್ಣಪುಟ್ಟ ಬಸ್ ಸರ್ವಿಸ್ ಒದಗಿಸಬೇಕೆಂಬುದನ್ನು ಯೋಚನೆ ಮಾಡುತ್ತೇವೆ.

ಶ್ರೀ ಎಚ್. ಡಿ ದೇವೇಗೌಡ.—ತಾವು ರಾಜ್ಯಾದ್ಯಂತ ಎಲ್ಲ ಊರಿಗೂ ರಸ್ತೆ ಸಂಪರ್ಕಗಳನ್ನು ಮಾಡಿಕೊಡುತ್ತೇವೆಂದು ಘೋಷಣೆಯ ಮೂಲಕ ಸಾರಿದ್ದೀರಿ. ಆದ್ದರಿಂದ ಕೇವಲ ಇದು ಒಂದನ್ನೇ ಮನಸ್ಸಿನಲ್ಲಿಟ್ಟುಕೊಳ್ಳದೆ ಸುಮಾರು 10 ಸಾವಿರ ಜನರಿಗೆ ಅನುಕೂಲವಾತಕ್ಕಂತಹ ಮತ್ತು ಬೈಂದೂರಿಗೆ ಸಂಪರ್ಕ ಕಲ್ಪಿಸಿ 1½ ಮೈಲು ಉಳಿತಾಯ ಮಾಡತಕ್ಕಂತಹ ಈ ಒಂದು ಯೋಜನೆಯನ್ನು ಕೇಂದ್ರ ಸರ್ಕಾರದ ಸಹಾಯ ಪಡೆದು ಇಲ್ಲವೇ ಬೇರೆ ರೀತಿಯಲ್ಲಿ ಸಂಪನ್ಮೂಲಗಳನ್ನು ಕಂಡುಹಿಡಿದು ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆದು ಬಂದು ಪ್ರಯಾರಿಟಿಯ ಪ್ರಶ್ನೆ. ಮೊದಲು ಕಡಿಮೆ ಖರ್ಚಿನಲ್ಲಿ ಹೆಚ್ಚು ಪ್ರಯೋಜನ ಉಂಟುಮಾಡತಕ್ಕ ಸೇತುವೆಗಳನ್ನು ಕಟ್ಟಿ, ನಂತರ ಹೆಚ್ಚು ಖರ್ಚಿನ ಸೇತುವೆಗಳನ್ನು ಮಾಡಿ ಅಲ್ಪಸಂಖ್ಯೆಯ ಜನರಿಗೆ ಅನುಕೂಲ ಮಾಡತಕ್ಕ ವಿಚಾರಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ಆದು ಎರಡನೆಯ ಪ್ರಿಯಾರಿಟಿಯಲ್ಲಿ ಬರುತ್ತದೆ ಆ ಕಾಲಕ್ಕೆ ಆದನ್ನು ಯೋಚನೆ ಮಾಡೋಣ.

ಶ್ರೀ ಕಾಗೋಡು ತಿಮ್ಮಪ್ಪ.—ಇಡೀ ರಾಜ್ಯದ ಹಿತದೃಷ್ಟಿಯಿಂದ ಈ ಒಂದು ಹೋಬಳಿಯ ಜನರು ಶರಾವತಿಯೋಜನೆಯ ಅಂಗವಾಗಿ ತ್ಯಾಗವನ್ನು ಮಾಡಿದ್ದಾರೆ. ಆದ್ದರಿಂದ ಇದಕ್ಕೆ ಒಂದು ವಿಶೇಷ ವಾದಂತಹ ಪ್ರಾಶಸ್ತ್ಯವನ್ನು ಕೊಟ್ಟು ಒಂದು ಸೇತುವೆಯನ್ನು ಮಾಡುವುದಕ್ಕೆ ಈಗಲಾದರೂ ಮನಸ್ಸು ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.— ಈ 10 ಸಾವಿರ ಜನರೇನು ಇದ್ದಾರೆ, ಅವರಿಗೆ ಸಂಪರ್ಕದ ಸೌಕರ್ಯ ಏರ್ಪಡಿಸುವುದಕ್ಕೆ ಇಂಟೀರಿಯರ್ ಬಸ್‌ಗಳನ್ನು ಮತ್ತು ರಸ್ತೆಯನ್ನು ಒದಗಿಸಿ ಕೊಡುವುದು ಸರ್ಕಾರದ ಕರ್ತವ್ಯ ಇದೆ. ಆದನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೇವೆ. ಆದರೆ ಈ ಒಂದೂಕಾಲು ಮೈಲು ಬ್ರಿಜ್ ಮಾಡುವುದಕ್ಕೆ ದುಡ್ಡು ಒಂದೇ ಅಲ್ಲ, ಇದಕ್ಕೆ ಟೆಕ್ನಿಕಲ್ ಡಿಫಿಕಲ್ಟೀಸ್ ಸಹ ಇವೆ. ಅಲ್ಲಿ ನೀರು 135 ಅಡಿ ಆಳ ಇದೆ ಆ ಕಾರಣದಿಂದ ಇದನ್ನು ಮಾಡುವುದು ಅಷ್ಟು ಎಕನಾಮಿಕಲ್ ಆಗುವುದಿಲ್ಲ. ಜನರ ಸೌಕರ್ಯಕ್ಕೊಸ್ಕರ ಒಂದಲ್ಲ, ಇನ್ನೊಂದು ಸ್ಟೀಂ ಲಾಂಚ್ ಬೇಕಾದರೂ ಒದಗಿಸಬಹುದು. ಈಚೆಗೆ ಇರತಕ್ಕ ಜನರಿಗೆ ವಿಲ್ಲಾ ಸಂಪರ್ಕಗಳ ವ್ಯವಸ್ಥೆಯನ್ನು ಆದ್ಯತೆ ಕೊಟ್ಟು ಮಾಡುವುದಕ್ಕೆ ಸರ್ಕಾರದ ಅಡ್ಡಿಯಿಲ್ಲ.

SUPPLY OF EUCALYPTUS TIMBER TO HARIHAR POLYFIBRE COMPANY

133 SRI KAGODU THIMMAPPA (Sagar):—

Will the Minister for Agriculture and Forests be pleased to state:—

(a) the quantum of Eucalyptus timber the Government has agreed to supply to Harihar Polyfibre company per annum;